ಎಂ ವಿ ಸಿ ನಂ. 250/2022
ಆರ್ ಡಬ್ಲ್ಯೂ: 1
ದಿನಾಂಕ 19/02/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ಅರ್ಜಿದಾರರ ಪರ: ಶ್ರೀ ಎಂ ಒ ಜೆ ವಕೀಲರಿಂದ:

2 ನೇ ಎದುರುದಾರರ ವಾಹನವಾದ ಕೆಎ-28 ಸಿ-0279 ಗೂಡ್ಸ್ ವಾಹನಕ್ಕೆ ನಮ್ಮ ಕಂಪನಿಯಿಂದ ವಿಮೆ ನೀಡಲಾಗಿದೆ ಎಂದರೆ ಸರಿ. ಸದರಿ ವಿಮಾ ಪಾಲಿಸಿ ದಿನಾಂಕ 06/12/2021 ರಿಂದ 05/12/2022 ರವರೆಗೆ ಚಾಲ್ತಿಯಲ್ಲಿತ್ತು ಎಂದರೆ ಸರಿ. 1 ನೇ ಎದುರುದಾರರಿಗೆ ಅಪಘಾತದ ಸಮಯದಲ್ಲಿ ಸೂಕ್ತವಾದ ಚಾಲನಾ ಪರವಾನಿಗಿ ಇತ್ತು ಎಂದರೆ ಸರಿ. ಅಪಘಾತಕ್ಕೆ ಸಂಬಂದಪಟ್ಟಂತೆ 2 ನೇ ಎದುರುದಾರರಿಗೆ ಸಂಬಂಧಿಸಿದ ಕೆಎ-28 ಸಿ-0279 ರ ವಾಹನದ ಚಾಲಕನ ವಿರುದ್ದ 1 ನೇ ಎದುರುದಾರರ ವಿರುದ್ದ ಪ್ರಥಮ ವರ್ತಮಾನ ವರದಿ ದಾಖಲಾಗಿತ್ತು ಎಂದರೆ ಸರಿಯಲ್ಲ. ಸಿಂಗಟಗೆರೆ ಪೋಲಿಸರು ತನಿಖೆ ಕೈಗೊಂಡು 1 ನೇ ಎದುರುದಾರರ ವಿರುದ್ದ ದೋಷಾರೋಪಣಾ ಪತ್ರ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ದೂರುದಾರರು ಮತ್ತು ಪೊಲೀಸರು ಸಾಮೀಲಾಗಿ ಸರಿಯಾಗಿ ತನಿಖೆ ಕೈಗೊಳ್ಳದೆ ತಪ್ಪಾಗಿ ದೋಷಾರೋಪಣಾ ಪತ್ರ ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಸ್ಥಳ ನಕಾಶೆಯಂತೆ ಕೆಎ-28 ಸಿ-0279 ವಾಹನ ಅಪಘಾತದ ಸ್ಥಳದಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ಸದರಿ ದೋಷಾರೋಪಣಾ ಪತ್ರದ ವಿರುದ್ದ ನಾನು ಸಕ್ಷಮ ಪ್ರಾಧಿಕಾರದ ಮುಂದೆ ಪ್ರಶ್ನೆ ಮಾಡಿರುತ್ತೇನಾ ಎಂದರೆ ಸಾಕ್ಷಿ ಸದರಿ ಕ್ರಿಮಿನಲ್ ಪ್ರಕರಣದಲ್ಲಿ ನಮ್ಮ ಸಂಸ್ಥೆ ಪಕ್ಷಗಾರರು ಅಲ್ಲದೆ ಇರುವುದರಿಂದ ಪ್ರಶ್ನಿಸಿಲ್ಲ ಎಂದು ನುಡಿಯುತ್ತಾರೆ.

ನನ್ನ ತಕರಾರಿನಲ್ಲಿ ಹೇಳಿರುವಂತೆ ಅಪಘಾತಕ್ಕೆ ಸಂಬಂದಪಟ್ಟಂತೆ ವಾಹನದ ಮಾಲೀಕರಾಗಲಿ ಅಥವಾ ಪೋಲೀಸರಾಗಲಿ ನಮ್ಮ ಸಂಸ್ಥೆಗೆ ಮಾಹಿತಿ ನೀಡಿಲ್ಲ ಎಂದು ತಿಳಿಸಿದ್ದು ಆ ಬಗ್ಗೆ ನಮ್ಮ ಸಂಸ್ಥೆ ವತಿಯಿಂದ ನೋಟೀಸನ್ನು ನೀಡಲಾಗಿದೆಯೇ ಎಂದರೆ ಸಾಕ್ಷಿ ವಿಮಾ ವಾಹನ ಅಪಘಾತದಲ್ಲಿ ಭಾಗಿಯಾಗದೇ ಇರುವುದರಿಂದ ಯಾವುದೇ ನೋಟೀಸು ನೀಡಿಲ್ಲ ಎಂದು ನುಡಿಯುತ್ತಾರೆ. ಅಪಘಾತಕ್ಕೆ ಸಂಬಂದಪಟ್ಟಂತೆ ನಮ್ಮ ಸಂಸ್ಥೆಯ ವತಿಯಿಂದ ಪ್ರತ್ಯೇಕ ಶನಿಖೆ ಕೈಗೊಳ್ಳಲಾಗಿದೆಯಾ ಎಂದರೆ ಸಾಕ್ಷಿ ಸಂಬಂದಪಟ್ಟ ದಾಖಲೆಗಳನ್ನು ಕ್ರೋಡೀಕರಿಸಿದ್ದರಿಂದ ಯಾವುದೇ ಪ್ರತ್ಯೇಕ ತನಿಖೆ ಕೈಗೊಂಡಿಲ್ಲ ಎಂದು ನುಡಿಯುತ್ತಾರೆ. 1 ನೇ ಎದುರುದಾರರ ಅತೀವೇಗ ಮತ್ತು ಅಜಾಗರೂಕತೆಯಿಂದ ಸದರಿ ಅಪಘಾತ ಆಗಿದೆ ಎಂದರೆ ಸುಳ್ಳು. 1 ನೇ ಅರ್ಜಿದಾರರ ಗಂಡ ಮೃತ ಚಂದ್ರಕಾಂತ್ ರವರು ಸರ್ಕಾರಿ ಆಸ್ಪತ್ರೆಯಲ್ಲಿ ಸಹಾಯಕ ಶುಶ್ರೂಕರಾಗಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿಯವರಿಗೆ ಮಾಸಿಕ 61,323/- ರೂ ವೇತನ ಪಡೆಯುತ್ತಿದ್ದರು ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಅಪಘಾತದ ಸಮಯದಲ್ಲಿ ಸದರಿ ಚಂದ್ರಕಾಂತರವರಿಗೆ 39 ವರ್ಷ ವಯಸ್ಸಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪಘಾತವು 2 ನೇ ಎದುರುದಾರರ ವಾಹನದಿಂದ ಮತ್ತು 1 ನೇ ಎದುರುದಾರರ ತಪ್ಪಿನಿಂದ ಆಗಿದ್ದು, ಸದರಿ ಅಪಘಾತದ ಸಮಯದಲ್ಲಿ ವಿಮೆ ಚಾಲ್ತಿಯಲ್ಲಿದ್ದುದರಿಂದ ನಮ್ಮ ಸಂಸ್ಥೆಯವರೇ ಅರ್ಜಿದಾರರಿಗೆ ಪರಿಹಾರ ನೀಡಬೇಕು ಎಂದರೆ ಸಾಕ್ಷಿ 2 ನೇ ಎದುರುದಾರರ ವಾಹನಕ್ಕೂ ಅಪಘಾತಕ್ಕೂ ಯಾವುದೇ ಸಂಬಂದ ಇಲ್ಲ ಎಂದು ನುಡಿಯುತ್ತಾರೆ. 2 ನೇ ಎದುರುದಾರರ ವಾಹನದಿಂದಲೇ ಅಪಘಾತವಾಗಿದ್ದರೂ ಸಹ ಪರಿಹಾರ ನೀಡುವುದರಿಂದ ತಪ್ಪಿಸಿಕೊಳ್ಳಲು

ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಆರ್-4 ರ ಮಹಜರಿನಂತೆ ಘಟನಾ ಸ್ಥಳದಲ್ಲಿ ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 08/01/2022 ರಂದು ಅಪಘಾತವಾಗಿದ್ದು ಅಪಘಾತವಾದ ಮರುದಿನವೇ ದೂರು ನೀಡಲಾಗಿದ್ದು ಯಾವುದೇ ಕಾಲವಿಳಂಬವಾಗಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.